Projects in Kanakapura Taluk.

218. Sri H. PUTTADASA (Sathanur).—

Will the Minister for Public Works be pleased to state :—

(*a*) the stage at which the work of the following projects in Kanakapura taluk stand at present :

(1) Guruchi Halla Project ;
(2) Neralahatti Project ;
(3) Thattekere Project ;
(4) Medamaranahalli Project ;
(5) Vadedoddi Project ;
(6) Volera Kothanur Project ;
(7) Bolare Project ;

(*b*) the years in which each of these projects reports were prepared and finalised ;

(*c*) the estimated cost of each of these projects ;

A.— Sri ALUR HANUMANTHAPPA (Deputy Minister for Minor Irrigation).—

(*a*) (1) Alternative proposals are under study.
(2) Not yet investigated.
(3) The estimate is under scrutiny.
(4) Not yet investigated.
(5) The estimate is under scrutiny.
(6) Not yet investigated.
(7) The estimate is under scrutiny.

(*b*) Projects are under study.

(*c*) The estimate cost of projects still under scrutiny are as follows :—

(1) Guruchihalla Project Rs. 4,10,000
(2) Thattekere Project Rs. 3,40,000
(3) Vodedoddi Project Rs. 5,46,000
(4) Bolare Project Rs. 3,80,000

9-30 A.M.

ಶ್ರೀ ಎಚ್. ಪುಟ್ಟದಾಸ.—ಸ್ವಾಮಿ, ನನ್ನ 'ಇ' ಪ್ರಶ್ನೆಗೆ ಉತ್ತರವಾಗಿ ಪರಿಶೀಲನೆಯಲಾಗುತ್ತಿರುವ ಯೋಜನೆಗಳು ಎಂದು ಹೇಳಿದ್ದೀರಿ, ಎಷ್ಟು ದಿವಸಗಳಲ್ಲಿ ಇದನ್ನು ಪರಿಶೀಲಿಸುತ್ತೀರಿ ಮತ್ತು ಯಾವ ಯಾವ ಹಂತಗಳಲ್ಲಿ ಪರಿಶೀಲನೆ ಮಾಡಲಾಗುತ್ತದೆ ?

†ಶ್ರೀ ಆಲೂರು ಹನುಮಂತಪ್ಪ.—ಪರಿಶೀಲನೆ ಮಾಡುವಂಥದ್ದು ಬೇಕಾದಷ್ಟು ಇದೆ. ಕೆಲಸ ಮಾಡಿ ಮುಗಿಸುವುದಕ್ಕೆ ಮೊದಲು ಯಾವ ಯಾವ ತಾಲ್ಲೂಕ್‌ಗಳಲ್ಲಿ ಯಾವ ಯಾವ ಮಟ್ಟದಲ್ಲಿ ಪರಿಶೀಲನೆಯಾಗುತ್ತದೆ ಎಂಬುದನ್ನು ನೋಡುವುದು ಬಹಳ ಮುಖ್ಯವಾಗಿರುತ್ತದೆ. ಸರ್ಕಾರದವರು ಸರಿಯಾದ ಹಂತದಲ್ಲಿ ಕೆಲಸವನ್ನು ಮಾಡಿಸಬೇಕಾಗುತ್ತದೆ. ಇಲ್ಲಿ 7 ಕೆಲಸಗಳ ಬಗ್ಗೆ ವಿವರವನ್ನು ಕೊಡಲಾಗಿದೆ. ಇನ್ನೂ ಹೆಚ್ಚಿನ ವಿವರಗಳು ಬೇಕಾದರೆ ಹೇಳುತ್ತೇನೆ.

ಶ್ರೀ ಎಚ್. ಪುಟ್ಟದಾಸ.—ನನ್ನ ತಾಲ್ಲೂಕ್‌ನಲ್ಲಿ ಇನ್ನೂ ಎಷ್ಟು ಕೆಲಸಗಳು ಪರಿಶೀಲನೆಯಲ್ಲಿವೆ ?

ಶ್ರೀ ಅಲೂರು ಹನುಮಂತಪ್ಪ.—ಮೂರು ಕೆಲಸಗಳ ಬಗ್ಗೆ ಇನ್ನೂ ಪರಿಶೀಲನೆಯಾಗ ಬೇಕಾಗಿದೆ. ನಾಲ್ಕು ಕೆಲಸಗಳ ಪರಿಶೀಲನೆಯಾಗಿ ಎಸ್ಟಿಮೇಟ್ ಸಿದ್ಧವಾಗುತ್ತಿದೆ.

ಶ್ರೀ ಎನ್. ಎ. ಜನ್ನೇಗೌಡ.—ನಾಲ್ಕು ಯೋಜನೆಗಳು ಪರಿಶೀಲನೆಯಾಗಿದೆಯೆಂದು ಹೇಳಿದಿರಿ, ಈ ಯೋಜನೆಗಳಿಂದ ಎಷ್ಟು ಎಕರೆಗೆ ನೀರಾವರಿಯಾಗುತ್ತದೆ ಮತ್ತು ಇದು ಬರೀ ಪರಿಶೀಲನೆಯು ಸರ್ಕಾರವೇ ಎಂದು ಕೇಳುತ್ತೇನೆ?

ಶ್ರೀ ಅಲೂರು ಹನುಮಂತಪ್ಪ.—4,10,000 ರೂಪಾಯಿಗಳ ಖರ್ಚಿನಲ್ಲಿ ತಯಾರಾಗುತ್ತಿರುವ ಗುರುಚಿಹಳ್ಳಿ ಯೋಜನೆಯಿಂದ 400 ಎಕರೆಗೆ ನೀರಾವರಿಯಾಗುತ್ತದೆ. ಇನ್ನೂ ಹೆಚ್ಚಿನ ಜಮೀನಿಗೆ ನೀರನ್ನು ಒದಗಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ನನ್ನ ಒಂದು ಕ್ರಿಯಾಲೋಪವೆಂದರೆ ತಾವು ಮಂತ್ರಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕ್ರಮಬದ್ಧವಾಗಿರತಕ್ಕಂಥ ಪ್ರಶ್ನೆಗಳನ್ನು ತೆಗೆದುಕೊಳ್ಳದೆ, ಕೊನೆಯ ಪ್ರಶ್ನೆಗಳನ್ನು ಮೊದಲು ತೆಗೆದುಕೊಂಡಿದ್ದೀರಿ. Otherwise Mr. Linga Reddy's question would have come up if the questions were taken up according to the list here. It is a matter of privilege. Please give a ruling. I want to know whether you are going to accommodate this side also. If members have got some other work and if they want to go elsewhere, you can kindly accommodate them by putting their questions earlier. It is a matter of privilege. I suggest that this question also may be taken up now and the question hour extended.

Mr. DEPUTY SPEAKER.—There is no point of order involved in the point raised by Mr. Nanje Gowda.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಮಾನ್ಯ ನಂಜೇಗೌಡರು ಎತ್ತಿದ ಕ್ರಿಯಾಲೋಪದ ಬಗ್ಗೆ ತಾವು ರೂಲಿಂಗ್ ಕೊಡಬೇಕು. ಒಬ್ಬ ಸದಸ್ಯನಿಗೆ ಒಂದು ವಿಧವಾದಂಥ ಆಶ್ರಯ ಕೊಟ್ಟರೆ ಇನ್ನೊಬ್ಬ ಸದಸ್ಯನನ್ನು ಕಡೆಗಣಿಸಿದಂತಾಗುತ್ತದೆ. ಮೇಲ್ಮನೆಯಲ್ಲಿ ಕೆಲಸವಿದೆಯೆಂದು ಮಂತ್ರಿಗಳು ಹೋಗಲಕ್ಕೆ ಅನುಕೂಲ ಮಾಡಿಕೊಡಬೇಕೆಂಬುದು ನಿಮ್ಮ ಉದ್ದೇಶವಿರಬಹುದು. ಆದರೆ ಒಬ್ಬ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಿಸಿ ಮತ್ತೊಬ್ಬ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಿಸದಿದ್ದರೆ, ಪ್ರಶ್ನೆ ಹಾಕಿದವರಿಗೆ ಉತ್ತರ ಕೇಳುವುದು ತಪ್ಪಿಹೋಗುತ್ತದೆ. ಇದರಿಂದ ಅವರ ಹಕ್ಕು ಬಾಧ್ಯತೆಗೆ ಕುಂಠಿತವಾದಂತೆ ಆಗುವುದಿಲ್ಲವೆ ಎಂದು ನೀವು ಯೋಚನೆ ಮಾಡಿ ನೋಡಬೇಕು. ಈ ಒಂದು ದೃಷ್ಟಿಯಿಂದ ತಾವು ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪರಿಶೀಲನೆ ಮಾಡಿ ಆ ಬಗ್ಗೆ ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri S. R. KANTHI.—In view of the representation made by the Opposition Members, since it has caused some hardship to one or two members whose questions could not be taken up, I suppose you may extend the question time and take those questions also and afterwards hold over the remaining questions.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವು ಎತ್ತಿರುವ ಕ್ರಿಯಾಲೋಪ ಬಹಳ ಮುಖ್ಯವಾದುದು ಇದು ಈ ಸಭೆಯ ಹಕ್ಕು ಬಾಧ್ಯತೆಗೆ ಸಂಬಂಧಪಟ್ಟ ವಿಷಯವಾಗಿದೆ. ತಾವು ಈ ವಿಷಯದ ಬಗ್ಗೆ ತಕ್ಷಣವೇ ರೂಲಿಂಗ್ ಕೊಡದಿದ್ದರೂ ಸಹ ಯೋಚನೆ ಮಾಡಿ ನಿರ್ಧಾನವಾಗಿ ರೂಲಿಂಗ್ ಕೊಡಬಹುದು. ಏಕೆಂದರೆ ಸದಸ್ಯರುಗಳ ಹಕ್ಕುಬಾಧ್ಯತೆಯನ್ನು ಕಾಪಾಡುವ ಪ್ರಶ್ನೆಯಾಗಿದೆ.

Sri H. N. NANJE GOWDA.—We request that our questions also may be taken up earlier.

ಶ್ರೀ ಎಸ್. ಆರ್. ಕಂತಿ.—ತೆಗೆದುಕೊಳ್ಳಬಹುದೆಂದು ನನ್ನ ಅಭಿಪ್ರಾಯವಾಗಿದೆ.

Mr. DEPUTY SPEAKER.—If members are agreeable, I have no objection to extend the Question time by half an hour.